<u>ಹಿರಿಯ ದಿವಾಣಿ ಮತ್ತು ಜೆ ಎಮ್ ಎಫ್ ಸಿ, ನ್ಯಾಯಾಲಯ, ಕುಂದಗೋಳ</u>

<u>ಸಿ.ಸಿ. ನಂ. **263/2024** ಸಿ. ಡಬ್ಲ್ಯೂ: **12** ಪಿ ಡಬ್ಲ್ಯೂ ಃ **8**</u>

ಸಾಕ್ಷಿಯ ಹೆಸರು ಃ ಯಲ್ಲಪ್ಪ ಸಂತಪ್ಪನ್ನವರ

ತಂದೆಯ ಹೆಸರು ಃ ನಾಗಪ್ಪ

ವಯಸ್ಸು ಃ 43 ವರ್ಷ

ಉದ್ಯೋಗ ಃ ಮುಖ್ಯ ಪೇದೆ, ಅಣ್ಣಿಗೇರಿ ಪೋಲೀಸ್ ಠಾಣೆ

ವಾಸಸ್ಥಳ ಃ ಅಣ್ಣಿಗೇರಿ.

ದಿನಾಂಕಃ 15/04/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

<u>ಮುಖ್ಯ ವಿಚಾರಣೆಃ ಸಸಅ ರವರಿಂದ</u>

1. ನಾನು ದಿಃ 15-05-2020 ರಿಂದ 24-06-2025 ರ ವರೆಗೆ ಕುಂದಗೋಳ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕೆಲಸ ಮಾಡಿದ್ದೇನೆ. ದಿಃ 24/10/2023 ರಂದು ರಾತ್ರಿ 09-15 ಗಂಟೆಗೆ ನಾನು ಎಸ್ ಎಚ್ ಓ ಕರ್ತವ್ಯದಲ್ಲಿದ್ದಾಗ ಚಾಸಾ 1 ಅವರು ನೀಡಿದ ಗಣಕೀಕೃತ ಪಿರ್ಯಾದಿಯನ್ನು ಸ್ವೀಕರಿಸಿ ಠಾಣಾ ಗುನ್ನಾ ಸಂಖ್ಯೆ 140/2023 ರಂತೆ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೂ ಮತ್ತು ಮೇಲಾಧಿಕಾರಿಗಳಿಗೂ ಕಳುಹಿಸಿಕೊಟ್ಟಿರುತ್ತೇನೆ. ದಿಃ 25/10/2023 ರಂದು ಗುನ್ನೆ ಸ್ಥಳದ ಪಂಚನಾಮೆಯನ್ನು ಬೆಳಿಗ್ಗೆ 10-30 ರಿಂದ 11-30 ರ ವರೆಗೆ ಚಾಸಾ 2 ಮತ್ತು 3 ರ ಸಮಕ್ಷಮ ಚಾಸಾ 8 ಅವರು ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆ ಮಾಡಿ ಸ್ಥಳದಲ್ಲಿದ್ದ ಕೆ ಎಸ್ ಆರ್ ಟಿ ಸಿ ಬಸ್ ನಂಬರ ಕೆಎ-27 ಎಫ್-664 ಮತ್ತು ಲಾರಿ ನಂಬರ ಟಿಎನ್-88-ಡಿ-9437 ಗಳನ್ನು ಜಪ್ತಿ ಪಡಿಸಿಕೊಂಡು ಅದೇ ಸಮಯದಲ್ಲಿ ಸ್ಥಳದ ಭಾವ ಚಿತ್ರವನ್ನು ತೆಗೆಸಿರುತ್ತೇನೆ. ಅದೇ ದಿನ ಚಾಸಾ 4 ರಿಂದ 8 ರ ಹೇಳಿಕೆ ಹಾಗೂ ಚಾಸಾ 1 ರ ಮರು ಹೇಳಿಕೆ ಪಡೆದುಕೊಂಡಿರುತ್ತೇನೆ.

2. ದಿಃ 25-10-2023 ಆರೋಪಿತನಿಗೆ ಕಲಂ 41 ಎ ಸಿ ಆರ್ ಪಿ ಸಿ ಅಡಿ ಠಾಣೆಗೆ ಹಾಜರಾಗುವಂತೆ ನೋಟೀಸ ಕೊಟ್ಟಿರುತ್ತೇನೆ. ಅದೇ ದಿನ ಆರೋಪಿಯನ್ನು ದಸ್ತಗಿರಿ ಕ್ರಮ ಅನುಸರಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಮಹೇಶ ಬಿ ಗಲಗ್ ಅವರಿಂದ ಕಲಂ 65 ಬಿ ಸಾಕ್ಷ್ಯ ಅಧಿನಿಯಮದಡಿ ಭಾವ ಚಿತ್ರಗಳ ಸಂಬಂಧ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ. ದಿಃ 15-02-2024 ರಂದು ಚಾಸಾ 1, 4 ರಿಂದ 6 ಮತ್ತು

ಆರೋಪಿ ಗಾಯಾದ ಪ್ರಮಾಣ ಪತ್ರವನ್ನು ಹುಬ್ಬಳ್ಳಿಯ ಕೆ ಎಮ್ ಸಿ ಆಸ್ಪತ್ರೆಯಿಂದ ಪಡೆದಿರುತ್ತೇವೆ.

3. ವಾಹನಗಳ ತಾಂತ್ರಿಕ ಪರೀಕ್ಷೆ ಮಾಡಿ ವರದಿ ನೀಡುವಂತೆ ಚಾಸಾ 11 ಅವರಿಗೆ ಪತ್ರ ಬರೆದಿರುತ್ತೇನೆ. ದಿಃ 30-10-2023 ರಂದು ಚಾಸಾ 11 ಅವರಿಂದ ಐ ಎಮ್ ವಿ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಚಾಸಾ 7 ಮತ್ತು ಬಸ್ಸನ ಡಿಪೋದವರಿಗೆ ಮತ್ತು ಲಾರಿಯ ದಾಖಲಾತಿಗಳನ್ನು ಒದಗಿಸುವಂತೆ ಕಲಂ 133 ಎಮ್ ವಿ ಕಾಯ್ದೆಯಡಿ ನೋಟೀಸ ಕೊಟ್ಟಿರುತ್ತೇನೆ. ಅದೇ ದಿನ ಚಾಸಾ 7 ಮತ್ತು ಶಂಕರ ಹಂಚಾಟೆ ಅವರ ಹೇಳಿಕೆ ಪಡೆದು ಮುಚ್ಚಳಿಕೆ ಪತ್ರದ ಆಧಾರದ ಮೇಲೆ ಬಸ್ಸು ಮತ್ತು ಲಾರಿಯನ್ನು ಅವರ ಮಧ್ಯಂತರ ವಶಕ್ಕೆ ನೀಡಿರುತ್ತೇನೆ. ಆರೋಪಿ ಕರ್ತವ್ಯದಲ್ಲಿದ್ದ ಬಗ್ಗೆ ಶಂಕರ ಹಂಚಾಟೆ ಅವರಿಂದ ಹಾಜರಾತಿ ಪ್ರಮಾಣ ಪತ್ರ ಮತ್ತು ಬಸ್ಸಿನ ದಾಖಲಾತಿಗಳನ್ನು ಪಡೆದಿರುತ್ತೇನೆ. ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತನ ಮೇಲೆ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ದೂರನ್ನು ಈಗ ನೋಡುತ್ತಿದ್ದು ಈಗಾಗಲೇ ನಿಪಿ. 3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 3 ಎ ಎಂದು ಗುರುತಿಸಲಾಯಿತು.

4. ಸ್ಥಳ ಪಂಚನಾಮೆಯನ್ನು ಈಗಾಗಲೇ ನಿಪಿ. 1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 1 ಸಿ ಎಂದು ಗುರುತಿಸಲಾಯಿತು. ಭಾವ ಚಿತ್ರವನ್ನು ಈಗಾಗಲೇ ನಿಪಿ. 2 ಎಂದು ಗುರುತಿಸಲಾಗಿದೆ. ಪ್ರಥಮ ವರ್ತಮಾನ ವರದಿಯನ್ನು ನಿಪಿ. 12 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 12 ಎ ಎಂದು ಗುರುತಿಸಲಾಯಿತು. ಚಾಸಾ 1, 4, 5 ಮತ್ತು ಆರೋಪಿಯ ಗಾಯದ ಪ್ರಮಾಣ ಪತ್ರಗಳನ್ನು ಈಗಾಗಲೇ ನಿಪಿ. 7 ರಿಂದ 10 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 7 ಬಿ ಯಿಂದ 10 ಬಿ ಎಂದು ಗುರುತಿಸಲಾಯಿತು. ಚಾಸಾ 6 ರ ಗಾಯದ ಪ್ರಮಾಣ ಪತ್ರವನ್ನು ನಿಪಿ. 13 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 13 ಎ ಎಂದು ಗುರುತಿಸಲಾಯಿತು. ಐ ಎಮ್ ವಿ ವರದಿಯನ್ನು ಈಗಾಗಲೇ ನಿಪಿ. 5 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 5 ಬಿ ಎಂದು ಗುರುತಿಸಲಾಯಿತು. ಕಲಂ 133 ಎಮ್ ವಿ ಕಾಯ್ದೆಯ ನೋಟೀಸನ್ನು ನಿಪಿ. 14 ಮತ್ತು 15 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 14 ಎ ಮತ್ತು 15 ಎ ಎಂದು ಗುರುತಿಸಲಾಯಿತು.

5. ಇಂಡೇಮನಿಟಿ ಬಾಂಡ್ ಗಳನ್ನು ನಿಪಿ. 16 ಮತ್ತು 17 ಎಂದು ಗುರುತಿಸಲಾಗಿದ್ದು, ಆರೋಪಿ ಚಾಲಕನಾಗಿದ್ದ ಸಂಬಂಧ ಶಂಕರ ಹಂಚಾಟೆ ಅವರು ನೀಡಿದ ಹಾಜರಾತಿ ಪತ್ರ, ಧೃಡೀಕೃತ ಪತ್ರವನ್ನು ಮತ್ತು ಕಲಂ 65 ಬಿ ಪ್ರಮಾಣ ಪತ್ರ ನಿಪಿ. 18 ಮತ್ತು 19 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್ ಬಿ ಎಚ್ ವಕೀಲರಿಂದ ಃ</u>

6. ಚಾಸಾ 1 ನಿಪಿ. 3 ರಂತೆ ದೂರು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ಹೋಗಿ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ. 2 ಅಪಘಾತ ಸ್ಥಳದಲ್ಲಿ ತೆಗೆದ ಭಾವ ಚಿತ್ರವಲ್ಲ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರ ಹೇಳಿಕೆಯನ್ನು ಹಾಗೂ ಚಾಸಾ 1 ರ ಮರು ಹೇಳಿಕೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಗಾಯದ ಪ್ರಮಾಣ ಪತ್ರ ಹಾಗೂ ಐ ಎಮ್ ವಿ ವರದಿಯನ್ನು ಪಡೆಯದೇ ಇದ್ದರೂ ಪಡೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ದಸ್ತಗಿರಿ ಮಾಡಿ ಬಿಡುಗಡೆ ಮಾಡಿಲ್ಲ, ಶಂಕರ ಹಂಚಾಟೆ ಅವರಿಂದ ದಾಖಲೆಗಳನ್ನು ಪಡೆದಿಲ್ಲ ಹಾಗೂ ಅವರ ಮಧ್ಯಂತರ ವಶಕ್ಕೆ ಬಸ್ಸನ್ನು ಬಿಡುಗಡೆ ಮಾಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗುವಂತೆ ವೈದ್ಯರಿಂದ ಗಾಯದ ಪ್ರಮಾಣ ಪತ್ರಗಳನ್ನು ಸೃಷ್ಟಿಸಿ ಹಾಜರು ಪಡಿಸಿ, ಸುಳ್ಳು ದೋಷರೋಪಣೆ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಕಲಂ 65 ಬಿ ಪ್ರಮಾಣ ಪತ್ರವನ್ನು ನಾನು ಪಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ 1 ಅವರಿಗೆ ಅನುಕೂಲವಾಗಲಿ ಎಂದು ಸುಳ್ಳು ದೂರನ್ನು ಪಡೆದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತನಿಖಾ ಕಾಲದಲ್ಲಿ ಆರೋಪಿ ಯಾವುದೇ ಆರೋಪ ಮಾಡಿಲ್ಲದಿರುವುದು ನನ್ನ ಗಮನಕ್ಕೆ ಬಂದಿದ್ದರು ಸಹ ಸುಳ್ಳು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು, ಕುಂದಗೋಳ.